ಪ್ರಜಾವಾಣಿ

Saturday, December 17, 2011

# ಟೆನಿಸ್: ಎಂಟರ ಘಟ್ಟಕ್ಕೆ ಜೈನ್, ಉಸ್ಮಾನಿಯಾ

ಪ್ರಜಾವಾಣಿ ವಾರ್ತೆ

ಉಡುಪಿ: ಬೆಂಗಳೂರಿನ ಜೈನ್ ವಿಶ್ವ ವಿದ್ಯಾಲಯ ಮತ್ತು ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯ ತಂಡಗಳು, ಮಣಿಪಾಲ ವಿವಿ ಮರಿನಾ ಕ್ರೀಡಾ ಸಂಕೀರ್ಣದಲ್ಲಿ ಶುಕ್ರವಾರ ಆರಂಭವಾದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಪುರುಷರ ಟೆನಿಸ್ ಟೂರ್ನಿಯ ಕ್ವಾರ್ಟರ್ ಫೈನಲ್ ಹಂತ ತಲುಪಿವೆ.

ಫಲಿತಾಂಶ ವಿವರ: ಜೈನ್ ವಿವಿಗೆ 3–0 ಅಂತರದಿಂದ ಮಣಿಪುರ ವಿ.ವಿ. ವಿರುದ್ಧ ಗೆಲುವು. (ವಿನೋದ್ ಗೌಡ ಅವರಿಗೆ 6–0,6–0 ಅಂತರದಿಂದ ಮಣಿಪುರ ವಿವಿ ತಂಡದ ಸಂಜಯ್ ಸಿಂಗ್ ವಿರುದ್ಧ; ವೀರವಸಂತ್ ಅವರಿಗೆ 6–1, 6–1ರಿಂದ ಅಕೋಯ್ಜಂ ಸಿಂಗ್ ವಿರುದ್ಧ; ಡಬಲ್ಸ್‌ನಲ್ಲಿ ಕಿರಣ್ ಮತ್ತು ಸಾಗರ್ ಅವರಿಗೆ 6–0, 6–1 ರಲ್ಲಿ ಸನ್ನಿ ಮತ್ತು ಸಂಜಯ್ ವಿರುದ್ಧ ಗೆಲುವು).

ಉಸ್ಮಾನಿಯಾ ವಿ.ವಿ. ತಂಡಕ್ಕೆ 3–0 ಯಿಂದ ಕೋಲ್ಕತ್ತಾ ವಿ.ವಿ. ತಂಡದ ವಿರುದ್ಧ ಗೆಲುವು. ಗುಜರಾತ್ ವಿಶ್ವವಿದ್ಯಾಲಯ ತಂಡಕ್ಕೆ 3–0 ಅಂತರದಿಂದ ಅಣ್ಣಾಮಲೈ ವಿಶ್ವವಿದ್ಯಾಲಯ ವಿರುದ್ಧ ಗೆಲುವು.